ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಚಿಕ್ಕಮಗಳೂರು ಕ್ಷೇತ್ರದ ಸಿರವಾನೆ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ಉಡುಪಿ-ಮಲ್ಪೆನಗರ ಯೋಜನಾ ಪ್ರಾಧಿಕಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 525 (1179)

ಶ್ರೀ ಯು.ಆರ್.ಸಭಾಪತಿ, ಎಂ.ಎಲ್.ಎ (ಉಡುಪಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ - ಮಲ್ಪೆ ನಗರ ಯೋಜನಾ ಪ್ರಾಧಿಕಾರವು ಯಾವಾಗ ಪ್ರಾರಂಭವಾಯಿತು?

ಆ) ನಗರ ಯೋಜನಾ ಪ್ರಾಧಿಕಾರದ ಕಛೇರಿಗೆ ಮಂಜೂರಾದ ಹುದ್ದೆಗಳು ಎಷ್ಟು? ಎಷ್ಟು ಜನ ಕೆಲಸ ನಿರ್ವಹಿಸುತ್ತಿದ್ದಾರೆ (ವಿವರ ನೀಡುವುದು)

ಇ) ಉಡುಪಿ - ಮಲ್ಪೆ ನಗರದ ಗಡಿಯನ್ನು ವಿಸ್ತರಿಸಿದ್ದರಿಂದ ಸಂಬಂಧಪಟ್ಟ ಆಸುಪಾಸಿನ ಗ್ರಾಮಸ್ಥರು ಕಟ್ಟಡ ನಿರ್ಮಾಣ ಭೂಪರಿವರ್ತನೆ ಇತ್ಯಾದಿ ಕೆಲಸಗಳಿಗೆ ನಗರ ಯೋಜನಾ ಪ್ರಾಧಿಕಾರವನ್ನು ಅವಲಂಭಿಸಬೇಕಾಗಿರುವುದು ಹಾಗೂ ಸಾರ್ವಜನಿಕರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ವಿಷಯದ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) 01-7-76ರಿಂದ ಪ್ರಾರಂಭವಾಗಿದೆ.

ಆ) 2 ಹುದ್ದೆಗಳು (ತಾತ್ಕಾಲಿಕ ಮಂಜೂರಾತಿ) ಮೂವರು ಕೆಲಸ ನಿರ್ವಹಿಸುತ್ತಿದ್ದಾರೆ.

1. ಕು:ಮೋಹಿನಿ, ಎರಡನೇ ದರ್ಜೆ ಸಹಾಯಕಿ.

2. ಶ್ರೀ ಸದಾನಂದ, ಜವಾನ

3. ಶ್ರೀ ಕೆ.ಗಣೇಶ್, ಇಂಜಿನಿಯರಿಂಗ್ ಪದವೀದರರು (ಹುದ್ದೆ ಮಂಜೂರಾಗಿಲ್ಲ.)

ಇ) ಉಡುಪಿ ಮಲ್ಪೆ ಗಡಿಯನ್ನು ವಿಸ್ತರಿಸಿದ್ದರಿಂದ ಗ್ರಾಮಸ್ಥರಿಗೆ ಕಟ್ಟಡ ನಿರ್ಮಾಣ

ಭೂ ಪರಿವರ್ತನೆ ಇತ್ಯಾದಿ ಕೆಲಸಗಳಿಗೆ ಯಾವುದೇ ತೊಂದರೆಯಾಗಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ:- ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಲ್ಲಿ ಗುರುತಿಸಿದ ಫಲಾನುಭವಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 527 (1182)

ಶ್ರೀ ಯು.ಆರ್.ಸಭಾಪತಿ, (ಉಡುಪಿ):- ಮಾನ್ಯ ಸಣ್ಣ ಕೈಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1995-96ರಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಗುರುತಿಸಿದ ವಿದ್ಯಾವಂತ ನಿರುದ್ಯೋಗಿ ಫಲಾನುಭವಿಗಳು ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ಇದರಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ಸೌಲಭ್ಯ ನೀಡಿದೆ. (ತಾಲ್ಲೂಕುವಾರು ವಿವರ ನೀಡುವುದು)

ಇ) ಇಲಾಖೆ ಗುರುತಿಸಿದ ಅರ್ಹ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಸೌಲಭ್ಯ ನೀಡದೆ ಇದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎ.ಮೊಯಿಯುದ್ದೀನ್ (ಸಣ್ಣ ಕೈಗಾರಿಕೆ ರಾಜ್ಯ ಸಚಿವರು):-

ಅ ಮತ್ತು ಆ) 1995-96ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿ 2794 ಫಲಾನುಭವಿಗಳನ್ನು ಗುರುತಿಸಿದ್ದು, ಅದರಲ್ಲಿ 1210 ಜನ ಫಲಾನುಭವಿಗಳಿಗೆ ಬ್ಯಾಂಕುಗಳು ಸಾಲ ಮಂಜೂರು ಮಾಡಿವೆ.

ವಿವರಗಳು ಈ ಕೆಳಗಿನಂತಿದೆ:

		ಗುರುತಿಸಲ್ಪಟ್ಟ	
ಕ್ರಸಂ.	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ	ಮಂಜೂರಾತಿ ಪಡೆದ ಅಭ್ಯರ್ಥಿಗಳ ಸಂಖ್ಯೆ
1.	ಮಂಗಳೂರು	789	361
2.	ಬಂಟ್ವಾಳ	218	84
3.	ಕುಂದಾಪುರ	266	117
4.	ಕಾರ್ಕಳ	242	98
5.	ಉಡುಪಿ	795	356